ದಳ್ಳಾಳಿ ರಹಿತ ಮಾರುಕಟ್ಟೆ

2298 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾರುಕಟ್ಟೆ ದಳ್ಳಾಳಿ ಇಲ್ಲದೆಯೇ ರೈತರ ಉತ್ಪತ್ತಿ ಮಾರಾಟ ಮಾಡಲು ಸಾಧ್ಯವೆಂಬುದನ್ನು ಸರ್ಕಾರಕ್ಕೆ ಗೊತ್ತಿದೆಯೇ?

ಆ) ದಲ್ಲಾಲರನ್ನು ಮಾರುಕಟ್ಟೆಯಿಂದ ಹೊರ ಹಾಕದೆ ರೈತರ ಶೋಷಣೆ ತಪ್ಪಿಸಲು ಸಾಧ್ಯವಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಹೌದು.

ಆ) ದಲ್ಲಾಲಿ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆ ಆಗುವವರೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ದಲ್ಲಾಲಿ ವರ್ಗವನ್ನು ಮುಂದುವರಿಸಬೇಕಾಗುತ್ತದೆ. ದಲ್ಲಾಲರಿಂದ ರೈತರಿಗಾಗುವ ಶೋಷಣೆಯನ್ನು ತಪ್ಪಿಸಲು ಕಾಯ್ದೆಯಡಿಯಲ್ಲಿ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ.

ಹಾಸನ ಮಹಿಳಾ ಪಾಲಿಟೆಕ್ನಿಕ್ ಕಟ್ಟಡ ದುರಸ್ತಿ

2429 - ಶ್ರೀ ಕೆ.ಹೆಚ್. ಹನುಮೇಗೌಡ, (ಹಾಸನ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಹಾಸನ ಮಹಿಳಾ ಪಾಲಿಟೆಕ್ನಿಕ್ ಕಟ್ಟಡವು ತುಂಬಾ ಶಿಥಿಲವಾಗಿದ್ದು ಮಳೆಗಾಳಿಯಿಂದ ರಕ್ಷಣೆ ಇಲ್ಲದೆ ವಿದ್ಯಾರ್ಥಿನಿಯರು ತುಂಬಾ ತೊಂದ್ರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಆ) ಈ ಕಟ್ಟಡದ ನಿರ್ಮಾಣವನ್ನು ವಿಶ್ವ ಬ್ಯಾಂಕ್ ಸಹಾಯದಿಂದ ಕಟ್ಟಲು ಸಾಧ್ಯವಿಲ್ಲವೆ, ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ವಿಶ್ವಬ್ಯಾಂಕ್ ಸಹಾಯದಿಂದ ಖಾಸಗಿ ಪಾಲಿಟೆಕ್ನಿಕ್‌ಗಳ ಕಟ್ಟಡ ಕಟ್ಟುವ ಕಾರ್ಯ ಕ್ರಮವೇನಾದರೂ ಸರ್ಕಾರ ಕೈಗೊಡಿರುವುದು ನಿಜವೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ಬಂದಿದೆ.

ಆ) ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ ಅಳವಡಿಸಲು, ಸಂಬಂಧಿಸಿದ ಸಂಸ್ಥೆಯು ಎ.ಐ.ಸಿ.ಟಿ.ಇ.ಯಿಂದ ಮಾನ್ಯತೆ ಪಡೆದಿರಬೇಕು. ಹಾಸನದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕೌನ್ಸಿಲ್‌ನಿಂದ ಇನ್ನೂ ಅನುಮೋದಿತವಾಗಿಲ್ಲ. ಅದಾಗ್ಯೂ, ಅಂತಹ ಅನುಮೋದನೆಯನ್ನು ಕಾಯ್ದಿರಿಸಿ, ಈ ಪಾಲಿಟೆಕ್ನಿಕ್‌ನ ಕಟ್ಟಡದ ಕೆಲಸವನ್ನು 1991-92ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ, ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ವಿಶ್ವಬ್ಯಾಂಕ್ ಯೋಜನೆಯ ಕೆಪಾಸಿಟಿ ಎಕ್ಸ್‌ಪ್ಯಾನ್‌ಷನ್ ಕಾರ್ಯಕ್ರಮದಲ್ಲಿ, ಖಾಸಗಿ ಅನುದಾನಿತ ಸಂಸ್ಥೆಯಾದ ಜೆ.ಎಸ್. ಮಹಿಳಾ ಪಾಲಿಟೆಕ್ನಿಕ್‌ನ ವಿದ್ಯಾರ್ಥಿನಿಲಯ ಕಟ್ಟಡ ಕಟ್ಟಲು, ಆಯ್ಕೆ ಮಾಡಿಕೊಳ್ಳಲಾಗಿದೆ.

ರಾಜ್ಯದಲ್ಲಿ ಇಂಜಿನೀಯರಿಂಗ್ ಶಿಕ್ಷಣದ ಬಗ್ಗೆ

2224 - ಶ್ರೀ ವಿಜಕುಮಾರ ಶೆಟ್ಟಿ, (ಸುರತ್ಕಲ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇಂಜಿನೀಯರಿಂಗ್ ಶಿಕ್ಷಣದ ಪಠ್ಯ ಕ್ರಮಗಳನ್ನು ಎಂದು ಪುನರ್ ರಚಿಸಲಾಯಿತು? (ಎಷ್ಟು ಸಮಯವಾಗಿದೆ)